ದಿನಾಂಕಃ **06.02.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಎಸ್ ರವರಿಂದಃ

ವಿದ್ಯುತ್ ಮತ್ತು ನೀರಿನ ಬಿಲ್ ನ್ನು ನಾನು ಪ್ರತಿವಾದಿಗೆ ನೇರವಾಗಿ ಪಾವತಿಸುತ್ತೇನೆ. **2018** ನೇ ಇಸವಿಯಿಂದ ನಾನು ಪರತಿವಾದಿಗೆ ಯಾವುದೇ ವಿದ್ಯುತ್ ಮತ್ತು ನೀರಿನ ಬಿಲ್ ನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ. ದಿಃ**12.03.2019** ರಲ್ಲಿ ಪ್ರತಿವಾದಿಯು ನನ್ನ ಬಳಿ ಸೆಕ್ಯೂರಿಟಿ ಹಣದ ಪೈಕಿ ರೂ.**1,50,000/-** ಹಣವನ್ನು ಬಾಕಿ ಬಿಲ್ ಗಳಿಗಾಗಿ ಕಾಯ್ದಿರಿಸಿ ಉಳಿಕೆ ರೂ.**3,50,000/-** ಹಣಕ್ಕೆ ನಾನು ಪ್ರತಿವಾದಿಗೆ ಚೆಕ್ ನೀಡಿರುತ್ತೇನೆ ಎಂದರೆ ಸಾಕ್ಷಿಯು ಹಣ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು **2019** ನೇ ಮಾರ್ಚ್ ನಲ್ಲಿ ಮೇಲ್ ವಿಚಾರಣೆ ನಡೆಸುವಾಗ ದಾವಾ ಸ್ವತ್ತಿನಲ್ಲಿನ ಜನರೇಟರ್ ಸುವ್ಯವಸ್ಥೆವಾಗಿ ನಾನು ಇಟ್ಟಿರಲಿಲ್ಲ ಎಂದರೆ ಸರಿಯಲ್ಲ. ಹಾಗೂ ಹೋಟಲ್ ನಲ್ಲಿನ ಅಡಿಗೆ ಸಾಮಾನುಗಳು ಮತ್ತು **kitchen chimani and stove** ನ್ನು ಸಹ ಸುವ್ಯವಸ್ಥೆವಾಗಿ ನಾನು ಇಟ್ಟಿರಲಿಲ್ಲ ಎಂದರೆ ಸರಿಯಲ್ಲ. **2019** ನೇ ಮಾರ್ಚ್ ತಿಂಗಳ ವರೆವಿಗೂ ಯಾವುದೇ ವಿದ್ಯತ್ ಮತ್ತು ನೀರಿನ ಬಿಲ್ ನ್ನು ನಾನು ಪಾವತಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರತಿ ದಿವಸ **6000/-** ನಾನು ಪರತಿವಾದಿಗೆ ಕೊಡಬೇಕಾದ ಲೈಸನ್ಸ್ ಫೀ ಯನ್ನು ಫೆಬ್ರುವರಿ ರಿಂದ ಮಾರ್ಚ್ ತಿಂಗಳವರೆಗೂ ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ಪ್ರತಿವಾದಿಯು ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ನೋಟಿಸನ್ನು ತೋರಿಸಿ ಈ ನೋಟಿಸನ್ನು ಪ್ರತಿವಾದಿಗೆ ನಿವೇ ನೀಡಿರುವುದು ಎಂದರೆ

ಸಾಕ್ಷಿಯು ಒಪ್ಪಿಕೊಂಡ ಮೆರೆಗೆ ನಿಡಿ-**3** ಎಂದು ಗುರುತಿಸಲಾಯಿತು. ನಿಡಿ-**3** ನೋಟಿಸಿಗೆ ಪ್ರತಿವಾದಿಯು ರೀ ಪ್ಲೆ ನೋಟಿಸು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡ ಮೆರೆಗೆ ನಿಡಿ-**4** ಎಂದು ಗುರುತಿಸಲಾಯಿತು. ದಾವಾ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ಪೇಮೆಂಟ್ ಗಳನ್ನು ಬಾಕಿ ಇದ್ದವು ಎಂದರೆ ಸರಿಯಲ್ಲ. ಈ ಬಗ್ಗೆ ನಾನೇ ಪ್ರತಿವಾದಿಗೆ ರೂ.**5,59,422/-** ನ್ನು ಪಾವತಿಸಲು ನಾನೇ ಬಾಧ್ಯ ಇರುತ್ತೇನೇ ಎಂದರೆ ಸರಿಯಲ್ಲ. ರೂ. **5** ಲಕ್ಷ ಸೆಕ್ಯೂರಿಟಿ ಹಣವನ್ನು ಮುಟ್ಟುಗೊಲು ಹಾಕಿಕೊಂಡರು ಸಹ ನಾನೇ ಪ್ರತಿವಾದಿಗೆ ರೂ.**59,422/-** ಪ್ರತಿವಾದಿಗೆ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಮೇಲ್ಕಂಡ ರೀತಿಯ ಎಲ್ಲಾ ರೀತಿಯ ಹಣಕ್ಕೆ ಬಾಧ್ಯಳಿದ್ದರೂ ಸಹ ಪ್ರಕರಣದಲ್ಲಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರ್ಚ್ **2019** ನೇ ಇಸವಿಯ ಕಾಲಕ್ಕೆ ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.